## ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥರ

ದಿವ್ಯ ಉಪಸ್ಥಿತಿಯಲ್ಲಿ

**ತಾ.11-05-2008ರಿಂದ ತಾ.13-05-2008ರ ವರೆಗೆ ಮಂಗಳೂರಿನಲ್ಲಿ ನಡೆಯಲಿರುವ**

**ಶ್ರೀ ಸುಬ್ರಹ್ಮಣ್ಯ ಸಭಾ ಶತಮಾನೋತ್ಸವ ಸಮಾರಂಭಕ್ಕೆ**

## ಹಾರ್ದಿಕ ಶುಭಾಶಯಗಳು

ನಾವು ನಮ್ಮ ಶ್ರೀ ಶಾರದಾ ಪತ್ರಿಕೆಯಲ್ಲ ಶತಮಾನೋತ್ಸವ ಆಚರಣೆಯ ಜಾಹೀರಾತು, ಪ್ರಕಟಣೆ, ಕಾಲಕಾಲಕ್ಕೆ ನಡೆದ ಕಾರ್ಯಕ್ರಮಗಳ ವಿವರಗಳನ್ನು ಪ್ರತೀ ತಿಂಗಳು ಪ್ರಕಟಿಸಿ, ಸಾಮಾಜಿಕ ಸಂಘಟನೆಯ ಕೆಲಸವನ್ನು ಹಾಗೂ ಶತಮಾನೋತ್ಸವದ ಸಂಭ್ರಮದ ಸುದ್ದಿಯನ್ನು ಸಮಾಜದ ಮನೆಮನೆಗೆ ತಲುಪಿಸಲು ನಿಮ್ಮೆಲ್ಲರ ಸಹಕಾರದಿಂದ ಪ್ರಯತ್ನಿಸಿದ್ದೇವೆ. ಇದೀಗ ಸಮರೋಪದ ಹಾದಿಯಲ್ಲಿರುವ ಈ ಕಾರ್ಯಕ್ರಮವು ಯಶಸ್ವಿಯಾಗಲೀ. ಈ ಮೂಲಕ ಸಮಾಜದ ಸಂಘಟನೆಯು ಇನ್ನೂ ದೃಢವಾಗಲಿ, ಗುರು-ದೇವತಾನುಗ್ರಹವು ಸಮಾಜದ ಪಾಲಿಗೆ ಸಿಗುವಂತಾಗಲಿ ಎಂದು ಹಾರೈಸುತ್ತೇವೆ.

| | |
|---|---|
| **ಅಧ್ಯಕ್ಷರು/ಕಾರ್ಯದರ್ಶಿ/ಕಾರ್ಯಕಾರಿ ಸಮಿತಿ** | **ಸಂಪಾದಕ ಮಂಡಳಿ** |
| ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), | ಶ್ರೀ ಶಾರದಾ ಮಾಸಪತ್ರಿಕೆ, |
| ಕುಂಜಿಬೆಟ್ಟು ಉಡುಪಿ - 576 102 | ಕುಂಜಿಬೆಟ್ಟು, ಉಡುಪಿ. |

## ಡಾ। ದಯಾನಂದರಾವ್ ಸಾಲವಿದ್ಯಾರ್ಥಿವೇತನಕ್ಕೆ ರೂ.2.50 ಲಕ್ಷ

ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ)ದ ವಿದ್ಯಾರ್ಥಿ ವೇತನ ನಿಧಿಗೆ 'ಸಾಲ ವಿದ್ಯಾರ್ಥಿ ವೇತನ' ವಿತರಣೆಗಾಗಿ ಕಳೆದ ಎರಡು ವರ್ಷಗಳಂತೆ ಈ ವರ್ಷವೂ ಬೆಂಗಳೂರಿನ ಡಾ। ದಯಾನಂದರಾವ್ ಎಜುಕೇಶನ್ ಟ್ರಸ್ಟ್‌ವತಿಯಿಂದ 'ರತ್ನಮ್ಮ ಸ್ಮಾರಕ ಸಾಲ ವಿದ್ಯಾರ್ಥಿವೇತನ'ಕ್ಕಾಗಿ ರೂ.2.50 ಲಕ್ಷ ಮಂಜೂರಾಗಿರುತ್ತದೆ ಎಂದು ತಿಳಿಸಲು ಸಂತೋಷಪಡುತ್ತೇವೆ. ಸಾಲ ವಿದ್ಯಾರ್ಥಿವೇತನ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳು/ಹೆತ್ತವರು ಮುಂದಿನ ಸಂಚಿಕೆಯಲ್ಲಿ ನಿರೀಕ್ಷಿಸುವುದು. ಹಾಗೆಯೇ ಸಾಲ ವಿದ್ಯಾರ್ಥಿ ವೇತನಕ್ಕಾಗಿ ಹಣ ಬಿಡುಗಡೆಮಾಡಿದ ಡಾ। ದಯಾನಂದ ರಾವ್ ಹಾಗೂ ಟ್ರಸ್ಟ್‌ನ ಪದಾಧಿಕಾರಿಗಳಿಗೆ ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವು ಅನಂತ ಧನ್ಯವಾದವನ್ನು ಅರ್ಪಿಸುತ್ತದೆ.

## ಕುಂದಾಪುರದಲ್ಲಿ ಅಖಿಲ ಭಾರತ ಮಟ್ಟದ ವೇದ ಸಮ್ಮೇಳನ

ಕುಂದಾಪುರ ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ದಿವ್ಯ ಉಪಸ್ಥಿತಿ ಮತ್ತು ಮಾರ್ಗದರ್ಶನದಲ್ಲಿ ಮೇ 6ರಿಂದ 10ರ ವರೆಗೆ ಇಲ್ಲಿನ ಶ್ರೀ ಕುಂದೇಶ್ವರ ದೇವಸ್ಥಾನದಲ್ಲಿ ಶ್ರೀ ಶಂಕರ ಜಯಂತೀ ಉತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು. ಈ ಸಂದರ್ಭದಲ್ಲಿ ಶೃಂಗೇರಿ ಜಗದ್ಗುರು ಮಹಾಸಂಸ್ಥಾನದ ವೇದಪೋಷಕ ಸಭಾದ ಆಶ್ರಯದಲ್ಲಿ ಅಖಿಲ ಭಾರತ ಮಟ್ಟದ ವೇದ ಪಂಡಿತರ ಸಮ್ಮೇಳನವೊಂದನ್ನು ಏರ್ಪಡಿಸಲಾಗಿದೆ. ದೇಶದಾದ್ಯಂತದ ಚತುರ್ವೇದ ಪಂಡಿತರು ಭಾಗವಹಿಸುವ ಈ ಸಮ್ಮೇಳನವನ್ನು ಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ಮೇ 6ರಿಂದ ಐದು ದಿನಗಳ ಕಾಲ ಇಲ್ಲಿನ ಶ್ರೀ ಕುಂದೇಶ್ವರ ದೇವಸ್ಥಾನದ 'ಶ್ರೀ ಭಾರತೀತೀರ್ಥ ಕೃಪಾ ಪ್ರವಚನ ಮಂದಿರ'ದಲ್ಲಿ ನಡೆಸಲಾಗುವುದು. ಇದೇ ಸಂದರ್ಭದಲ್ಲಿ ಇತ್ತೀಚೆಗೆ ವೇದಾಧ್ಯಯನ ಮುಗಿಸಿದ ಯುವ ವೇದ ವಿದ್ವಾಂಸರಿಗೆ ಪರೀಕ್ಷೆ ನಡೆಸಿ, ಶ್ರೀ ಶಂಕರ ಜಯಂತೀ ಉತ್ಸವದ ಸಮಾರೋಪ ಸಮಾರಂಭದಂದು ಅವರನ್ನು ಅರ್ಹತಾ ಪತ್ರ ನೀಡಿ ಗೌರವಿಸುವುದಲ್ಲದೆ, ಸಮ್ಮೇಳನದಲ್ಲಿ ಭಾಗವಸಿದ ವೇದ ವಿದ್ವಾಂಸರನ್ನು ಸೂಕ್ತ ರೀತಿಯಲ್ಲಿ ಸನ್ಮಾನಿಸಲಾಗುವುದೆಂದು ಶ್ರೀ ಶಂಕರ ಜಯಂತೀ ಉತ್ಸವ ಸಮಿತಿಯ ಪ್ರಕಟಣೆ ತಿಳಿಸಿದೆ

## ನಾಗಬನ ಜೀರ್ಣೋದ್ಧಾರ

ಎಲ್ಲೂರು ಕಾಶೀ ಸಂತಾನ ಕುಟುಂಬಸ್ಥರ ನಾಗಬನ, ಪಂಚದೈವಸ್ಥಾನಗಳ ಜೀರ್ಣೋದಾರ ಕಾರ್ಯಕ್ರಮವು ಇತ್ತೀಚೆಗೆ ವಿಶ್ವೇಶ್ವರ ದೇವಳದ ಸರದಿ ಅರ್ಚಕರಾದ ವೇದಮೂರ್ತಿ ಕೃಷ್ಣಮೂರ್ತಿ ಭಟ್ ಇವರ ನೇತೃತ್ವದಲ್ಲಿ ಸರದಿ ತಂತ್ರಿಗಳಾದ ವೇದಮೂರ್ತಿ ವೆಂಕಟರಾಜ ತಂತ್ರಿ ಇವರ ಪೌರೋಹಿತ್ಯದಲ್ಲಿ ಜರಗಿತು. ಮೂಲಮನೆಯ ವೈ. ರಾಮಕೃಷ್ಣರಾವ್ ಕುಟುಂಬದ ಪರವಾಗಿ ಕರ್ತೃಗಳಾಗಿದ್ದರು.

ತಾ.26-03-2008 ಪೂರ್ವಾಹ್ನ ವಿಶ್ವನಾಥ ದೇವರಲ್ಲಿ ಪ್ರಾರ್ಥನೆ, ಮಹಾರುದ್ರಯಾಗ, ಬ್ರಾಹ್ಮಣ ಸಂತರ್ಪಣೆಯೊಂದಿಗೆ ಸಂಜೆ ಜೀರ್ಣೋದಾರಗೊಂಡ ನಾಗಬನ, ನಾಗಶಿಲೆ, ಪಂಚದೈವಗಳ ಪ್ರಾಸಾದ ಶುದಿ, ರಾಕ್ಷೋಘ್ನ ಹೋಮ, ವಾಸ್ತು, ಬಲಿ, ಬಿಂಬಾದಿವಾಸ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಜರಗಿತು.

ತಾ.27-03-2008ರ ಮೀನ ಲಗ್ನ ಸುಮುಹೂರ್ತದಲ್ಲಿ ಪ್ರಾರ್ಥನೆ, ನಾಗಪ್ರತಿಷ್ಠೆ, ಕಲಶಾಭಿಷೇಕ, ಆಶ್ಲೇಷ ಬಲಿ, ನಾಗದರ್ಶನ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳ ಜರಗಿತು. ಸಂಜೆ ದೈವಗಳ ಪುನರ್‌ಪ್ರತಿಷ್ಠಾ ಕಾರ್ಯಕ್ರಮಗಳು ಜರಗಿದವು.

ತಾ.28-03-2008ರಂದು ಪ್ರೇತ ಸದ್ಗತಿಯ ಬಗ್ಗೆ ನಾರಾಯಣ ಬಲಿ, ಪ್ರಾಯಶ್ಚಿತ್ತ ಹೋಮ, ಸಪಿಂಡೀಕರಣ ಶ್ರಾದ ಮೊದಲಾದ ಕಾರ್ಯಕ್ರಮಗಳು ಜರಗಿದವು. ಮರುದಿನ ವಡಭಾಂಡೇಶ್ವರ ಕ್ಷೇತ್ರದಲ್ಲಿ ಕ್ಷೇತ್ರ ವಿಧಿ ನಡೆಸಿ ಪ್ರೇತ ವಿಸರ್ಜನೆ ಮಾಡಲಾಯಿತು.

ಈ ಎಲ್ಲಾ ಕಾರ್ಯಕ್ರಮಗಳಿಗೆ ಕುಟುಂಬಸ್ಥರು ಹಾಗೂ ನೆಂಟರು ರೂ.4 ಲಕ್ಷಕ್ಕೂ ಮೇಲ್ಪಟ್ಟು ಆರ್ಥಿಕ ನೆರವನ್ನು ಆತ್ಮ ಸಂತೋಷದಿಂದ ನೀಡಿರುತ್ತಾರೆ.

ಆರೂಢ ಪ್ರಶ್ನೆಯಲ್ಲಿ ತೋರಿ ಬಂದ ಪ್ರಕಾರ ಪ್ರತಿ ವರ್ಷವೂ ನಾಗಬನ, ದೈವಸ್ಥಾನಗಳಲ್ಲಿ ಮಾಸಿಕ ವಾರ್ಷಿಕ ಕಾರ್ಯಕ್ರಮಗಳು ಜರಗಬೇಕಾಗಿದೆ. ಹಾಗೂ ಶ್ರೀ ವಿಶ್ವೇಶ್ವರ ದೇವಸ್ಥಾನಕ್ಕೆ ಪ್ರತೀ ವರ್ಷವೂ ಕಾಣಿಕೆ ಸಲ್ಲಿಸಬೇಕಾಗಿದೆ. ಅದಕ್ಕಾಗಿ ರೂ.3 ಲಕ್ಷಗಳ ಶಾಶ್ವತ ಠೇವಣಿ ಇರಿಸುವ ಉದ್ದೇಶವಿದೆ. ಕುಟುಂಬಸ್ಥರು ಶಕ್ತ್ಯಾನುಸಾರ ದೇಣಿಗೆ ನೀಡಬೇಕಾಗಿ ನಾಗಬನ ಜೀರ್ಣೋದಾರ ಸಮಿತಿಯ ವಿನಂತಿ.

**ವರದಿ : ಸುದರ್ಶನ್ ರಾವ್, ಅದಮಾರು**

## ಶ್ರೀ ಶಾರದಾ ಮಂಟಪದಲ್ಲಿ ಶ್ರೀ ಶಂಕರ ಜಯಂತಿ ಆಚರಣೆ

ಉಡುಪಿಯ ಕುಂಜಿಬೆಟ್ಟಿನ ಶ್ರೀ ಶಾರದಾ ದೇವಸ್ಥಾನ ಹಾಗೂ ಜ್ಞಾನಭಾರತಿ ಉಡುಪಿ ಇವರ ಜಂಟಿ ಆಶ್ರಯದಲ್ಲಿ ತಾ. 09-05-2008ರ ಸಂಜೆ 4 ಗಂಟೆಗೆ ಶ್ರೀ ಶಂಕರ ಜಯಂತಿ ಪ್ರಯುಕ್ತ ವಿಶೇಷ ಉಪನ್ಯಾಸ ಕಾರ್ಯಕ್ರಮ ನೆರವೇರಲಿದೆ.

ಅಂದು ಮಧ್ಯಾಹ್ನ ಶ್ರೀ ಶಾರದಾ ದೇವಸ್ಥಾನದಲ್ಲಿ ವಿಶೇಷ ಪೂಜೆ ಹಾಗೂ ಸಂಜೆ ಭಜನೆ ಮೊದಲಾದ ಕಾರ್ಯಕ್ರಮಗಳು ನೆರವೇರಲಿದೆ. ಈ ಕಾರ್ಯಕ್ರಮದಲ್ಲಿ ಭಕ್ತಬಾಂಧವರು ಭಾಗವಹಿಸಿ, ಶ್ರೀ ಶಂಕರರ ಕೃಪೆಗೆ ಪಾತ್ರರಾಗಬೇಕೆಂದು ವಿನಂತಿ

ಕಾರ್ಯದರ್ಶಿ

ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ) ಕುಂಜಿಬೆಟ್ಟು ಉಡುಪಿ - 576 102

## ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ ಪಾವಂಜೆ, ಅಂಚೆ ಹಳೆಯಂಗಡಿ

ಆತ್ಮೀಯರೇ,

ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ವರ್ಷಾವಧಿ ಉತ್ಸವವು
**ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಪರಮಾನುಗ್ರಹದಿಂದ**
ಶ್ರೀ ಸರ್ವಧಾರಿ ನಾಮ ಸಂ।ರದ ಚೈತ್ರ ಶುದ ಸಪ್ತಮಿಯಿಂದ ತ್ರಯೋದಶಿಯವರೆಗೆ
**ದಿನಾಂಕ 12-04-2008ನೇ ಶನಿವಾರದಿಂದ**
**ದಿನಾಂಕ 18-04-2008 ಶುಕ್ರವಾರದವರೆಗೆ** ನೆರವೇರಲಿರುವುದು.
ಈ ಕಾರ್ಯಕ್ರಮಗಳಿಗೆ ತಾವೆಲ್ಲರೂ ಆಗಮಿಸಿ ಉತ್ಸವವನ್ನು ಚಂದಗಾಣಿಸಿಕೊಟ್ಟು ಶ್ರೀ ದೇವರ ಶ್ರೀಮುಡಿ ಗಂಧ ಪ್ರಸಾದವನ್ನು ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ಅಪೇಕ್ಷಿಸುತ್ತೇವೆ.

ತಾ.17-04-2008ನೇ ಗುರುವಾರ ಪೂರ್ವಾಹ್ನ
***ರಥಾರೋಹಣ ಹಾಗೂ ಅನ್ನಸಂತರ್ಪಣೆ ಸಂಜೆ ರಥೋತ್ಸವ, ರಂಗಪೂಜೆ, ಬಲಿ, ಶಯನೋತ್ಸವ***
ತಾ.18-04-2008ನೇ ಶುಕ್ರವಾರ ಪೂರ್ವಾಹ್ನ
**ಕವಾಟೋದ್ಘಾಟನೆ, ಚೂರ್ಣೋತ್ಸವ, ತುಲಾಭಾರ ಸೇವೆ, ಮಹಾಪೂಜೆ, ಬಲಿ. ಸಂಜೆ ರಂಗಪೂಜೆ, ಅವಭೃತೋತ್ಸವ, ಧ್ವಜಾವರೋಹಣ, ಮಂತ್ರಾಕ್ಷತೆ, ಅಣ್ಣಪ್ಪ ಸ್ವಾಮಿಯ ನೇಮ.**

**- ಧರ್ಮದರ್ಶಿಗಳು, ಆಡಳಿತ ಮೊಕ್ತೇಸರರು ಹಾಗೂ ಮೊಕ್ತೇಸರರು**

## ಕುಂದಾಪುರದಲ್ಲಿ ರಾಜ್ಯ ಮಟ್ಟದ 'ಮಾಣಿಕ್ಯಮಂಜರೀ' ಕಂಠಪಾಠ ಸ್ಪರ್ಧೆ

ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ದಿವ್ಯ ಉಪಸ್ಥಿತಿಯೊಂದಿಗೆ ಇಲ್ಲಿನ ಶ್ರೀ ಕುಂದೇಶ್ವರ ದೇವಸ್ಥಾನದಲ್ಲಿ ನಡೆಯಲಿರುವ ಶ್ರೀ ಶಂಕರ ಜಯಂತಿ ಉತ್ಸವದ ಅಂಗವಾಗಿ ಮೇ 10ರ ಅಪರಾಹ್ನ 3.30ಕ್ಕೆ ರಘುನಾಥ ಸೂರಿ ವಿರಚಿತ 'ಮಾಣಿಕ್ಯಮಂಜರೀ' ಗ್ರಂಥದ ಕಂಠಪಾಠ ಸ್ಪರ್ಧೆಯೊಂದನ್ನು ಏರ್ಪಡಿಸಲಾಗಿದೆ. ರಾಜ್ಯ ಮಟ್ಟದ ಈ ಸ್ಪರ್ಧೆಯಲ್ಲಿ ಭಾಗವಹಿಸಿ, ತಪ್ಪಿಲ್ಲದೆ ಕಂಠಪಾಠ ಒಪ್ಪಿಸುವವರಿಗೆ ತಲಾ ರೂ. 500/-ರ ಬಹುಮಾನ ನೀಡಲಾಗುವುದು.

ಆಸಕ್ತರು 25-04-2008ರ ಒಳಗೆ ತಲುಪುವಂತೆ ತಮ್ಮ ಹೆಸರು ವಿಳಾಸ ಮತ್ತು ಇತರ ವಿವರಗಳೊಂದಿಗೆ 'ಕಾರ್ಯದರ್ಶಿ, ಶ್ರೀ ಶಂಕರ ಜಯಂತಿ ಉತ್ಸವ ಸಮಿತಿ; ಶ್ರೀ ಕುಂದೇಶ್ವರ ದೇವಸ್ಥಾನ; ಕುಂದಾಪುರ; ಉಡುಪಿ ಜಿಲ್ಲೆ' - ಇವರಲ್ಲಿ ತಮ್ಮ ಹೆಸರು ನೊಂದಾಯಿಸಿಕೊಳ್ಳಬಹುದೆಂದೂ, 'ಮಾಣಿಕ್ಯಮಂಜರೀ' ಪುಸ್ತಕ ಬೇಕಿದ್ದಲ್ಲಿ ಮುಂಚಿತವಾಗಿ ತಿಳಿಸಿದರೆ ಉಚಿತವಾಗಿ ಒದಗಿಸಲಾಗುವುದೆಂದೂ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಡಾ। ದಿವಾಕರ್ ಭಟ್-ಅತ್ಯತ್ತಮ ಪ್ರಬಂಧ ಪ್ರಶಸ್ತಿ

ನಿಟ್ಟೆ ಮಹಾಲಿಂಗ ಅಡ್ಯಂತಾಯ ಮೆಮೋರಿಯಲ್ ತಂತ್ರಜ್ಞಾನ ಸಂಸ್ಥೆ (NMAMIT NITTE) ಮುಖ್ಯ ಗ್ರಂಥ ಪಾಲಕರಾಗಿರುವ ಡಾ। ಎಚ್. ದಿವಾಕರ ಭಟ್ಟರಿಗೆ ದೆಹಲಿಯ (MANLIBNET) ನ 2ನೇ ರಾಷ್ಟ್ರೀಯ ಸಮ್ಮೇಳನದಲ್ಲಿ '2007-2008ನೇ ವರ್ಷದ ಅತ್ಯತ್ತಮ ಪ್ರಬಂಧ ಸ್ಪರ್ಧೆ ("Best Paper of the year 2007-2008") ಪ್ರಶಸ್ತಿ ನೀಡಲ್ಪಟ್ಟಿದೆ. ನವದೆಹಲಿಯ ಇಂಡಿಯನ್ ಕೌನ್ಸಿಲ್ ಫಾರ್ ಸೋಶಿಯಲ್ ಸಾಯನ್ಸ್‌ನಲ್ಲಿ 2008ರ ಫೆಬ್ರವರಿ 4 ರಿಂದ 6 ವರಗೆ ನಡೆದ ಸಮ್ಮೇಳನದಲ್ಲಿ ಈ ಪ್ರಶಸ್ತಿ ನೀಡಲಾಗಿದ್ದು ಡಾ। ಭಟ್ಟರು ಎರಡು ಪ್ರಬಂಧಗಳನ್ನು ಪ್ರಸ್ತುತ ಪಡಿಸಿದ್ದರು.

1) Information acquirement strategies by the manufacturing and process industries in Dakshina Kannada district: a case study.

2) Information seeking behavior of industrial management personneal : a study of three tiers System of management personnel working in wide reference to nine(9) departments in Manufacturing and process industries at Dakshina Kannada district.

3) The theme of the convention was "Business And Management Librarianship : The Decade Ahead''

ರಾಷ್ಟ್ರಾದ್ಯಂತ ಉನ್ನತ ಸಂಸ್ಥೆಗಳು ಸಂಶೋಧನಾ ಸಂಸ್ಥೆಗಳು, ಐಐಟಿ, ಐಐಎಂ.ಎಸ್. ನಂತಹ ವಿಶೇಷ ವೃತ್ತಿಪರ ಶಿಕ್ಷಣ ಸಂಸ್ಥೆಗಳಿಂದ ಒಟ್ಟು 59 ಪ್ರಬಂಧಗಳು ಸಮ್ಮೇಳನದಲ್ಲಿ ಪ್ರಸ್ತುತ ಪಡಿಸ್ಪಟ್ಟಿದ್ದವು. (MANLIBNET) ಸಂಸ್ಥೆಯು ಡಾ। ದಿವಾಕರ ಭಟ್ಟರನ್ನು 2008-2010ರ ಅವಧಿಗೆ ತನ್ನ ಕಾರ್ಯಕಾರಿ ಸಮಿತಿಗೆ ಸದಸ್ಯರಾಗಿ ನಾಮಾಂಕನ ಮಾಡಿದೆ.

ಡಾ। ದಿವಾಕರ ಭಟ್ಟರಿಗೆ **ಶ್ರೀ ಶಾರದಾ** ಶುಭಹಾರೈಕೆಗಳು.